


# ಕರಾವಳಿಯಿಂದ ಸಬಲೀಕರಣದ ದಿಗಂತದೆಡೆಗೆ: ಸಾಮಾಜಿಕ ಪರಿವರ್ತನೆಯ ಪಥ

**Dr. Shaila K.N**
Associate Professor, Department of History, Government Arts College, Bengaluru, Karnataka, India

* Corresponding Author: **Dr. Shaila K.N**

## Article Info

**P-ISSN:** 3051-3618
**E-ISSN:** 3051-3626
**Volume:** 06
**Issue:** 02
**Received:** 28-06-2025
**Accepted:** 21-07-2025
**Published:** 02-08-2025
**Page No:** 171-174

## Abstract

ಪಾಶ್ಚಿಮಾತ್ಯ ಸಂಸ್ಕೃತಿಯೊಡನೆ ಸಂಪರ್ಕ ಬೆಳೆದ ಪರಿಣಾಮಗಳಿಂದ ಪ್ರಭಾವಿತರಾದ ಹಲವಾರು ಬೌದ್ಧಿಕ ವ್ಯಕ್ತಿಗಳಲ್ಲಿ ಲೋಕತಾಂತ್ರಿಕ ಮತ್ತು ಉದಾರನೀತಿಗಳ ಬಗ್ಗೆ ಹೊಸ ಅರಿವು ಮೂಡತೊಡಗಿದವು. ಅದರಿಂದ ಉಂಟಾದ ಬದಲಾವಣೆಗಳ ಸಮಗ್ರ ಪರಿಣಾಮಗಳು ಭಾರತ ದೇಶದ ಸಾಮಾಜಿಕ ಜೀವನದ ಮೇಲೆ ಸ್ಥಾನವಾಗಿ ಆದರೆ ಸ್ಥಿರವಾಗಿ ಕಾಣಿಸಿಕೊಳ್ಳತೊಡಗಿತು.[೧] ಆದರೆ ಬ್ರಿಟಿಷ್ ಆಡಳಿತದ ಅವಶ್ಯಕತೆಗಳನ್ನು ಪೂರೈಸುವ ಹಿನ್ನೆಲೆಯಲ್ಲಿ ಬ್ರಿಟಿಷ್ ಮಾದರಿಯ ಆಧುನಿಕತೆ ಅಥವಾ ಅಭಿವೃದ್ಧಿ ಜಾರಿಗೆ ಬಂತು.[೨]

ವಸಾಹತುಶಾಹಿ ಆಡಳಿತದ ಸಂಧರ್ಭದಲ್ಲಿ ಭಾರತೀಯ ಸಮಾಜದಲ್ಲಿ ಬೇರೂರಿದ್ದ ಅನೇಕ ಸಾಮಾಜಿಕ ಅನಿಷ್ಟ ಪದ್ಧತಿಗಳು, ಅಸಮಾನತೆಗಳು ಮತ್ತು ಸಾಂಪ್ರದಾಯಿಕ ನಿರ್ಬಂಧಗಳ ವಿರುದ್ಧ ಸಮಾಜ ಸುಧಾರಣಾ ಚಳುವಳಿಗಳು ರೂಪುಗೊಂಡವು.

ಈ ಸಮಾಜ ಸುಧಾರಣಾ ಚಳುವಳಿಗಳ ಪ್ರಮುಖ ಆಶಯಗಳಲ್ಲಿ ಮಹಿಳೆಯರ ಶಿಕ್ಷಣ, ಸಾಮಾಜಿಕ ಸ್ಥಾನಮಾನ, ಸ್ವಾತಂತ್ರ್ಯ ಹಕ್ಕುಗಳು ಹಾಗೂ ಗೌರವಯುತ ಬದುಕಿಗೆ ಅವಕಾಶ ಕಲ್ಪಿಸುವುದು ಪ್ರಮುಖವಾಗಿತ್ತು. ಈ ಹಿನ್ನೆಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಶ್ರಮಿಸಿದ ಹಲವು ಸಮಾಜ ಸುಧಾರಕರು, ಧಾರ್ಮಿಕ ಹಾಗೂ ಸಾಮಾಜಿಕ ಚಿಂತಕರು ಮತ್ತು ಸಂಘಟಕರು ಮಹತ್ವದ ಪಾತ್ರ ವಹಿಸಿರುವುದು ಗಮನಾರ್ಹವಾಗಿದೆ. ತನ್ನ ವಿಶಿಷ್ಟ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಂಪರೆಯಿಂದಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಇತರ ಪ್ರದೇಶಗಳಿಗಿಂತ ವಿಭಿನ್ನವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಆಧುನಿಕ ಶಿಕ್ಷಣದ ವಿಸ್ತರಣೆ, ಮುದ್ರಣ ಮಾಧ್ಯಮದ ಬೆಳವಣಿಗೆ ಕ್ರೈಸ್ತ ಮಿಷನರಿಗಳ ಶೈಕ್ಷಣಿಕ ಚಟುವಟಿಕೆಗಳು, ಸ್ಥಳೀಯ ಸಂಘ ಸಂಸ್ಥೆಗಳ ಸ್ಥಾಪನೆ ಹಾಗೂ ರಾಷ್ಟ್ರೀಯ ಚಳುವಳಿಯ ಪ್ರಭಾವಗಳು ಮಹಿಳೆಯರ ಸಾಮಜಿಕ ಸ್ಥಿತಿಗತಿಗಳ ಕುರಿತು ಹೊಸ ಚರ್ಚೆಗಳಿಗೆ ಅವಕಾಶ ಕಲ್ಪಿಸಿದವು. ಈ ಲೇಖನವು ಆಯ್ದ ಸಮಾಜ ಸುಧಾರಕರು ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಕೈಗೊಂಡ ವಿವಿಧ ಸುಧಾರಣಾ ಕಾರ್ಯಗಳು ಹಾಗೂ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಅವರು ನೀಡಿದ ಕೊಡುಗೆಗಳನ್ನು ಐತಿಹಾಸಿಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ.

**DOI:** https://doi.org/10.54660/IJMFD.2025.6.2.171-174

**Keywords:** ಸಾಮಾಜಿಕ ಜಾಗೃತಿ, ಸಮಾಜ ಸುಧಾರಕರು, ಸುಧಾರಣೆಗಳು, ಮಹಿಳಾ ಸಬಲೀಕರಣ, ಶಿಕ್ಷಣ

## ಪರಿಚಯ

ಆರಂಭಿಕ ಸಮಾಜ ಸುಧಾರಣಾವಾದಿಗಳ ಚಿಂತನೆ ಮತ್ತು ಕಾರ್ಯಚಟುವಟಿಕೆಗಳು ಭಾರತೀಯ ಸಮಾಜದಲ್ಲಿ ಮಹಿಳಾ ಸಬಲೀಕರಣದ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದವು. ಮಹಿಳೆಯನ್ನು ಕೇವಲ ಕುಟುಂಬದ ಪರಿಧಿಗೆ ಸೀಮಿತಗೊಳಿಸುವ ರೂಢಿಗತ ಮನೋಭಾವವನ್ನು ಪ್ರಶ್ನಿಸಿ ಆಕೆಯನ್ನು ಶಿಕ್ಷಣ, ಸ್ವಾಭಿಮಾನ ಸಮಾನತೆ ಹಕ್ಕುಗಳನ್ನು ಹಠಿಡುಬಿಭಿಥೊಂದಿದ ವ್ಯಕ್ತಿತ್ವವಾಗಿ ಪರಿಗಣಿಸುವ ದೃಷ್ಟಿಕೋನ ಬೆಳೆಯಲಾರಂಭಿಸಿತು. ಮಹಿಳಾ ಶಿಕ್ಷಣದ

ವಿಸ್ತರಣೆಗೆ ಉತ್ತೇಜನ ನೀಡುವುದರ ಮೂಲಕ ಜ್ಞಾನ ಮತ್ತು ಅರಿವುಗಳನ್ನು ಮುಕ್ತಿಯ ಸಾಧನಗಳನ್ನಾಗಿ ರೂಪಿಸಿದರು. ಅನಿಷ್ಟಾಚರಣೆಗಳ ವಿರುದ್ಧ ಜಾಗೃತಿ ಮೂಡಿಸಿ ಗೌರವಯುತ ಬದುಕಿನ ಅವಕಾಶಗಳನ್ನು ಕಲ್ಪಿಸುವ ಪ್ರಯತ್ನ ನಡೆಸಿದರು. ಇದು ಮೌನ ಅನುಭವಿತೆಯಿಂದ ಸಕ್ರಿಯ ಭಾಗಿದಾರಳಾಗಿ ರೂಪಿಸುವ ಚಿಂತನೆಗೆ ಆಧುನಿಕ ಮಹಿಳಾ ಸಬಲೀಕರಣದ ಸಾಮಾಜಿಕ ಮತ್ತು ಬೌದ್ಧಿಕ ನೆಲೆಯನ್ನು ನಿರ್ಮಿಸಿದವು. ಈ ಲೇಖನವು ಆಯ್ದ ಸಮಾಜ ಸುಧಾರಕರು ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಕೈಗೊಂಡ ವಿವಿಧ ಸುಧಾರಣಾ ಕಾರ್ಯಗಳು ಹಾಗೂ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಅವರು ನೀಡಿದ ಕೊಡುಗೆಗಳನ್ನು ಐತಿಹಾಸಿಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ.

## ಕರಾವಳಿಯ ಆಯ್ದ ಸಮಾಜ ಸುಧಾರಕರು

### ಪಂಡಿತ ರಮಾಬಾಯಿ

೧೮೫೮ರಲ್ಲಿ ಕಾರ್ಕಳ ತಾಲೂಕಿನ ಚಿಕ್ಕ ಹಳ್ಳಿಯಲ್ಲಿ ಜನಿಸಿದ ರಮಾಬಾಯಿಯವರು ಪಂಡಿತ ರಮಾಬಾಯಿ ಸರಸ್ವತಿಯಾದ ಹಾದಿಯಲ್ಲಿ ದಾಟಿದ್ದ ಕಷ್ಟ ಕೋಟಲೆ, ನೋವುಗಳು ಅವರ ಅನುಭವವನ್ನು ಪಕ್ವಗೊಳಿಸಿ ಜಾಗತಿಕವಾಗಿ ಅವರನ್ನು ಗುರುತಿಸುವಂತೆ ಮಾಡಿದ್ದವು. ಹೆಣ್ಣು ಮಕ್ಕಳು ಪುರಾಣ ಗ್ರಂಥಗಳನ್ನು ಅಭ್ಯಾಸಿಸುವುದೇ ಅಪರಾಧವೆಂದು ತಿಳಿದಿದ್ದ ಕಾಲದಲ್ಲಿ ಗುರುಕುಲದಂತಹ ಮನೆಯಲ್ಲಿ, ಹೆತ್ತವರಿಂದಲೇ (ತಂದೆಯಿಂದ) ದೊರೆತ ಸಂಸ್ಕೃತ ಪಾಠ ರಮಾಬಾಯಿಯವರ ಭವಿಷ್ಯದ ಜೀವನಕ್ಕೆ ಅಡಿಗಲ್ಲಾಗಿತ್ತು. ಅಂದಿನ ಸಮಾಜದಲ್ಲಿದ್ದ ಜಾತಿಪದ್ದತಿಯ ಕೆಟ್ಟ ಆಚರಣೆಗಳು, ಹೆಣ್ಣಿಗೆ ದೊರಕದ ಶಿಕ್ಷಣ ಅವಕಾಶಗಳು, ಬಾಲ್ಯವಿವಾಹ, ಸತಿಪದ್ದತಿಯಂತಹ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳು ಅವರ ಆಲೋಚನಾ ಗತಿಯನ್ನೇ ಬದಲಾಯಿಸಿದ್ದವು.

೧೮೮೯ರಲ್ಲಿ ಮುಂಬಯಿಯಲ್ಲಿ ವಿಧವೆಯರಿಗಾಗಿ ‘ಶಾರದಾ ಸದನ’ ವೆಂಬ ಶಾಲೆಯನ್ನು ತೆರೆದರು. ಆರ್ಥಿಕ ಒತ್ತಡಗಳಿಂದಾಗಿ ಶಾಲೆಯನ್ನು ಮುಂಬಯಿಯಿಂದ ಪೂನಾಗೆ ಸ್ಥಳಾಂತರಿಸುವುದು ಅನಿವಾರ್ಯವಾಯಿತು.[೪] ಆತ್ಮವಿಶ್ವಾಸವನ್ನು ಗಳಿಸುತ್ತಾ ಹೋದಂತೆ ಹೊಸದಾಗಿ ವಿದ್ಯಾವತಿಯರಾದ ಹೆಣ್ಣು ಮಕ್ಕಳು ಮುಂದೆ ತಾವೇನು ಮಾಡಬೇಕೇಂದು ನಿರ್ಧರಿಸಲು ಸಮರ್ಥರಾಗುತ್ತಾರೆ ಎಂಬುವುದು ಆಕೆಯ ಎಣಿಕೆಯಾಗಿತ್ತು. [೫] ೧೮೯೭ರಲ್ಲಿ ಬಂದ ಬರಗಾಲದ ವೇಳೆ ಪೂನಾದಿಂದ ಮೂವತ್ತು ಮೈಲಿಗಳಷ್ಟು ದೂರದ ಖೇಡಗಾಂವ್ ನಲ್ಲಿ ರಮಾಬಾಯಿ ತಮ್ಮ ಎರಡನೆಯ ಶಾಲೆ ಮುಕ್ತಿಯನ್ನು ಆರಂಭಿಸಿದರು. ಬರಗಾಲದ ಕಷ್ಟಕ್ಕೆ ಸಿಲುಕಿದ ಹೆಂಗಸರನ್ನೂ, ಮಕ್ಕಳನ್ನೂ ರಮಾಬಾಯಿ ತಮ್ಮ ಶಾರದಾ ಸದನಕ್ಕೆ ಸೇರಿಸಿಕೊಳ್ಳತೊಡಗಿದರು. ರಮಾಬಾಯಿವರ ಸಂಸ್ಥೆಯಾದ ‘ಮುಕ್ತಿಗೆ’ ಆರ್ಥಿಕ ನೆರವು ಅಮೆರಿಕಾದಿಂದ ದೊರೆಯುತ್ತಿತ್ತು. ರಮಾಬಾಯಿಯವರದು ಅಸಾಧಾರಣ ಪ್ರಯತ್ನಗಳಾಗಿದ್ದು, ಇವರು ವಿಧವೆಯರನ್ನು ವಿದ್ಯಾವಂತರನ್ನಾಗಿಸುವ ಪ್ರಯತ್ನ ನಡೆಸಿದ ಮೊದಲ ಭಾರತೀಯರಾಗಿದ್ದಾರೆ.[೬]

### ಶ್ರೀ ನಾರಾಯಣ ಗುರು

೨೮ನೇ ಆಗಸ್ಟ್ ೧೮೫೬ರಲ್ಲಿ ಜನಿಸಿದ ಶ್ರೀ ನಾರಾಯಣ ಗುರುಗಳು ಸಮಾಜದ ಅಂಧಶ್ರದ್ಧೆಗಳನ್ನು ತಿರಸ್ಕರಿಸಿ ಜಾಗೃತಿ ಮೂಡಿಸಿದರು. ತಿರುವಾಂಕೂರಿನಲ್ಲಿ ಸವರ್ಣರಿಗೆ ಮಾತ್ರ ಮನುಷ್ಯನಂತೆ ಬಾಳಲು ಅಧಿಕಾರವಿದ್ದು, ವರ್ಣ ವ್ಯವಸ್ಥೆಯೊಳಗಿದ್ದ ಶೂದ್ರ ನಾಯರ ಬಾಳು ಕೂಡಾ ಮೂರಾಬಟ್ಟೆಯಾಗಿತ್ತು. ‘ಮುಂಡುಕೊಡು’ಪದ್ದತಿಯಿಂದ ಅನೈತಿಕವನ್ನು, ನೈತಿಕವೆಂದು ಹೇಳಿಕೊಂಡು ಶರೀರ ಸಂಬಂಧ ಇಟ್ಟುಕೊಳ್ಳುವ ಬ್ರಾಹ್ಮಣರ ಕಾಮತೃಷೆಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಒಡ್ಡುವ ನೀಚ ಸಂಪ್ರದಾಯವನ್ನು ಸಹಿಸಿಕೊಳ್ಳುವ ಅಗೌರವದ ಬಾಳು ನಾಯರ್ ಮತ್ತು ಅಂಬಳವಾಸಿಗಳದ್ದಾಗಿತ್ತು. ಮುಂಡುಕೊಡು ಅಂದರೆ ನಾಯರ್ ಮತ್ತು ಅಂಬಳವಾಸಿ ಕನ್ಯೆಯರನ್ನು ನಂಬೂದರಿಗಳು ತಮ್ಮ ಸ್ವಾಮಿತ್ವಕ್ಕೆ ಒಳಪಡಿಸಿ, ಮೀಸಲಾಗಿಟ್ಟುಕೊಳ್ಳುವ ವಿಧಿಯಲ್ಲಿ ಕನ್ಯೆಗೆ ಮತ್ತು ಆಕೆಯ ಕುಟುಂಬದವರಿಗೆ ಹಾಗೂ ಆ ನಂಬೂದಿರಿಯ ಸಂಬಂಧಿಗಳಿಗೆ ಮುಂಡು ಬಟ್ಟೆಗಳನ್ನು ಕೊಡುವ ವಿಧಿ. ಮುಂಡುಕೊಡು ವಿಧಿಯಿಂದ ಆ ಕನ್ಯೆ ನಂಬೂದರಿಗೆ ಮೀಸಲಾಗುತ್ತಾಳೆಯೇ ವಿನ: ಹೆಂಡತಿಯಾಗುತ್ತಿರಲಿಲ್ಲ. ದೈಹಿಕವಾಗಿ ಮದುವೆಗೆ ಸಿದ್ಧಳಾಗಿದ್ದಾಳೆ ಎಂದು ಸಾರ್ವತ್ರಿಕವಾಗಿ ಜಾಗೀರುಗೊಳಿಸುವ ಔತಣವನ್ನು ನಾರಾಯಣಗುರುಗಳು ಖಂಡಿಸಿದರು. ವಿವಾಹ ಪದ್ದತಿಯನ್ನು ಸರಳಗೊಳಿಸಿ ಮದುವೆಯ ಆಡಂಬರಗಳನ್ನು ಬಿಟ್ಟು, ಸರಳ ಧಾರ್ಮಿಕ ವಿಧಿ ಮತ್ತು ವಿಧಾನಗಳಿಂದ ಆಚರಿಸಲು ಕರೆಕೊಟ್ಟರು. ಬಾಲ್ಯವಿವಾಹವೆಂಬ ಸಾಮಾಜಿಕ ಪಿಡುಗಿನ ನಿಷೇಧಕ್ಕೆ ಕರೆಕೊಟ್ಟರು. ಯಾವುದೇ ಸಮಾಜವು ಹಳೆಯ ಅನಗತ್ಯ ಜಾಡ್ಯಗಳನ್ನು ಬಿಟ್ಟು ಕೊಡಲು ಮತ್ತು ಹೊಸತನವನ್ನು ರೂಢಿಸಿಕೊಳ್ಳಲು ಶಿಕ್ಷಣವೇ ಏಕಮಾತ್ರ ಮಾಧ್ಯಮ ಎನ್ನುವುದು ನಾರಾಯಣ ಗುರುಗಳ ಖಚಿತ ಅಭಿಪ್ರಾಯವಾಗಿತ್ತು. ಹೀಗಾದಾಗ ಮಾತ್ರ ಆಧುನಿಕ ಸಾಮಾಜಿಕ ಪುನರುತ್ಥಾನ ಹಾಗೂ ಪ್ರಗತಿಯ ಸಾಧ್ಯತೆಯಾಗುವುದು ಎಂದು ನಾರಾಯಣ ಗುರುಗಳು ನಂಬಿದ್ದರು.[೭]

### ಕುದ್ಮುಲ್ ರಂಗರಾವ್

ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಗೌರವಾರ್ಹ ಹಾಗೂ ಪ್ರತಿಷ್ಠಿತ ಸಾರಸ್ವತ ಬ್ರಾಹ್ಮಣ ಕುಲದಲ್ಲಿ ೨೯-೬-೧೮೫೯ರಂದು ಜನಿಸಿದ ಕುದ್ಮುಲ್ ರಂಗರಾಯರು ಹರಿಜನೋದ್ಧಾರಕ ಎಂದು ಹೆಸರುವಾಸಿಯಾಗಿದ್ದಾರೆ. ತಳಸಮುದಾಯದಲ್ಲಿ ನವಸ್ಪೂರ್ತಿ ಮತ್ತು ಸಾಮಾಜಿಕಪ್ರಜ್ಞೆ ಹಾಗೂ ಸಂಘಟನಾ ಮನೋಭಾವ ಉಂಟುಮಾಡಲು ರಂಗರಾಯರು ಶಕ್ತಿಮೀರಿ ದುಡಿದಿರುವರು. ರಂಗರಾಯರು ಸ್ಥಾಪನೆ ಮಾಡಿದ ಡಿ.ಸಿ ಮಿಶನ್ ಶಾಲೆಗಳಲ್ಲಿ, ಆಶ್ರಮ ಶಾಲೆಗಳಲ್ಲಿ ಓದು ಬರಹದ ಜೊತೆಗೆ ವೃತ್ತಿಪರ ಶಿಕ್ಷಣವನ್ನು ಕಲಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಬಡಗಿ ಕೆಲಸ, ನೇಯ್ಗೆ ಕೆಲಸ, ತೋಟಗಾರಿಕೆ, ಕಸೂತಿ ಮತ್ತು ರೇಷ್ಮೆ ಹುಳಗಳನ್ನು ಸಾಕಿ ರೇಷ್ಮೆ ತಯಾರಿಸುವುದು ಮತ್ತು ತಕಲಿಯಲ್ಲಿ ನೂಲುಸುತ್ತುವುದು ಇತ್ಯಾದಿ ವೃತ್ತಿಪರ ತರಬೇತಿ ಶಿಕ್ಷಣವನ್ನು ಅವರಿಗೆ ಕೊಡಲಾಗುತ್ತಿತ್ತು. ರಂಗರಯರು ಸ್ಥಾಪಿಸಿದ ಕೆಲವು ಅನುದಾನಿತ (ಯೇಡೆಡ್) ಶಾಲೆಗಳು ನಂತರದಲ್ಲಿ ಸರಕಾರಿ ಲೇಬರ್ ಶಾಲೆಗಳಾಗಿ ಮಾರ್ಪಟ್ಟವು. ಮಂಗಳೂರು, ತೋಕೂರು, ಬೋಳೂರು, ದಡ್ಡಲ್ ಕಾಡ್, ಜಪ್ಪು, ಅತ್ತಾವರ, ತಲಪಾಡಿ, ಉಳ್ಳಾಲ, ಮುಲ್ಕಿ, ಉಡುಪಿ, ಬನ್ನಂಜೆ, ನೇಜಾರು, ಪುತ್ತೂರು ಮುಂತಾದ ಕಡೆ ಸ್ಥಾಪಿಸಿದ ಶಾಲೆಗಳನ್ನು ನಡೆಸಿಕೊಂಡು ಬರುಲು ಕಷ್ಟಸಾಧ್ಯವಾದಾಗ ಸರಕಾರದ ವಶಕ್ಕೆ ಒಪ್ಪಿಸಿದರು. ಮುಂದೆ ಅವುಗಳನ್ನು ಡಿ.ಸಿ ಮಿಶನ್ ವತಿಯಿಂದ ಬಂದರೂ ಆವುಗಳಲ್ಲಿ ಕೆಲವನ್ನು ಸರಕಾರಕ್ಕೆ ಒಪ್ಪಿಸಿದರು.[೮] ಬ್ರಹ್ಮಸಮಾಜದ ಕ್ರಿಯಾಶೀಲ ಸದಸ್ಯರಾಗಿ ಮಂಗಳೂರಿನ ಪಂಚಮರ ಏಳಿಗೆಗಾಗಿ ದುಡಿದವರೆಂದರೆ ಕುದ್ಮುಲ್ ರಂಗರಾವ್.[೯]

ಧಾರ್ಮಿಕ ಚಿಂತನೆ ಮತ್ತು ಸಮಾಜದ ಸೇವಾಕಾಂಕ್ಷೆಯ ಉದ್ದೇಶವನ್ನಿಟ್ಟುಕೊಂಡ ರಂಗರಾಯರು, ಸಮಾಜದಲ್ಲಿನ ಸಮಾನತೆಯನ್ನು ಸಾರುವ ಹಾಗೂ ರಚನಾತ್ಮಕ ಕೆಲಸಗಳಲ್ಲಿ ನಂಬಿಕೆ ಇಟ್ಟುಕೊಂಡಿರುವ ಬ್ರಹ್ಮ ಸಮಾಜವನ್ನು ಸೇರಿದರು.[೧೦]

### ಕಾರ್ನಾಡ್ ಸದಾಶಿವ ರಾವ್

ದಕ್ಷಿಣ ಕನ್ನಡ ಜಿಲ್ಲೆಯ ಧುರೀಣರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು, ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದು ಜಿಲ್ಲೆಯಲ್ಲಿ ರಾಜಕೀಯ ಜಾಗೃತಿ ಮೂಡಿಸಿದರು.[೧೧] ಕಾರ್ನಾಡ್ ಸದಾಶಿವರಾಯರ ಪುತ್ರಿಯಾದ ಸುಗುಣಾ ಕಾರ್ನಾಡ್ ದೇಸಾಯಿಯವರು ತಮ್ಮ ತಂದೆಯವರ ಹೋರಾಟದ ಬದುಕಿನ ವಿವಿಧ ಮಜಲುಗಳನ್ನು ತೆರೆದಿಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಹಲವು ಸಾಮಾಜಿಕ ಸುಧಾರಣೆಗಳ ಹರಿಕಾರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಕಾರ್ನಾಡರು ಸ್ತ್ರೀ ಶಿಕ್ಷಣ ಮತ್ತು ವಿಧವಾ ಪುನರ್ವಿವಾಹ ಚಟುವಟಿಕೆಗಳಲ್ಲಿ ಆಸ್ಥೆ ಹೊಂದಿದ್ದರು. ಬ್ರಹ್ಮಸಮಾಜದ ಮೂಲಕ ಜಾತಿಬೇಧಗಳ ನಿವಾರಣೆಗೆ ಶ್ರಮಿಸಿದರು ಮಾತ್ರವಲ್ಲದೆ ಜಿಲ್ಲೆಯ ಮಹಿಳೆಯರ ಸಬಲೀಕರಣದ ನಿಟ್ಟಿನಲ್ಲಿ ಹಲವಾರು ಕಾರ್ಯಗಳನ್ನು ಕೈಗೊಂಡಿರುವರು.[೧೨]

### ಅಮ್ಮೆಂಬಳ ಸುಬ್ಬರಾವ್ ಪೈ

ಸುಸಂಸ್ಕೃತ ಮನೆತನವೊಂದರಲ್ಲಿ ಜನಿಸಿ ಬಾಲ್ಯದ ತನ್ನ ಸಂಕಷ್ಟದ ದಿನಗಳ ನಡುವೆಯೂ ಸಮಾಜದ ಹಿತಚಂತನೆಯ ಸಂಸ್ಕಾರದಿಂದ ಬೆಳೆದು ಮುಂದೆ ಮಹಾನ್ ಸಾಧಕರಾಗಿ ಮೂಡಿಬಂದವರು ಅಮ್ಮೆಂಬಳ ಸುಬ್ಬರಾವ್ ಪೈ. ಆರ್ಥಿಕ ಸ್ವಾವಲಂಬನೆ ಮತ್ತು ಶಿಕ್ಷಣ ಅದರಲ್ಲಿಯೂ ಮಹಿಳಾ ಶಿಕ್ಷಣದಿಂದ ಮಾತ್ರ ಜನತೆ ಮತ್ತು ಸಮಾಜದ ಅಭಿವೃದ್ಧಿ ಸಾಧ್ಯ ಎನ್ನುವ ದೂರದೃಷ್ಟಿ ಹೊಂದಿದ್ದ ಅಮ್ಮೆಂಬಳ ಸುಬ್ಬರಾವ್ ಪೈಯವರು ಕೆನರಾ ಶಿಕ್ಷಣ ಸಂಸ್ಥೆಗಳ ಮತ್ತು ಕೆನರಾ ಬ್ಯಾಂಕ್ ಸ್ಥಾಪನೆಯ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ಸಾಧಕ.
ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯಲ್ಲಿ ಎ. ಉಪೇಂದ್ರ ಪೈ ದಂಪತಿಯ ನಾಲ್ಕನೇ ಸುಪುತ್ರನಾಗಿ ೧೮೫೨ರ ನವೆಂಬರ್ ೧೯ ರಂದು ಅಮ್ಮೆಂಬಳ ಸುಬ್ಬರಾವ್ ಪೈ ಜನಿಸಿದರು. ೧೮೯೧ರಲ್ಲಿ ನಾಲ್ವರು ಯುವಕರಾದ ಬಂಟ್ವಾಳ ಪದ್ಮನಾಭ ಬಾಳಿಗ, ಅರ್ಕುಳಾ ವಾಸುದೇವ ರಾವ್, ಬಂಟ್ವಾಳ ವಾಮನ ಬಾಳಿಗ ಮತ್ತು ಉದ್ಯಾವರ ಶ್ರೀನಿವಾಸ್ ರಾವ್ ಇವರ ಉತ್ಸಾಹದ ಪ್ರತಿಫಲವಾಗಿ ಕೆನರಾ ಹೈಸ್ಕೂಲ್ ಜನ್ಮ ತಳೆಯಿತು. ಐವರು ಸ್ಥಾಪಕ ಮಹನೀಯರ ಪೈಕಿ ತರಬೇತಿ ಪಡೆದ ಏಕೈಕ ಪದವೀಧರರಾಗಿದ್ದ ಎ.ವಾಸುದೇವ ರಾವ್ ಮೊದಲು ಮುಖ್ಯೋಪಾಧ್ಯಾಯರಾದರು.[೧೩] ೧೮೯೪ರಲ್ಲಿ ಕೆನರಾ ಹೆಣ್ಮಕ್ಕಳ ಪ್ರೌಢ ಶಾಲೆಯನ್ನು ಸ್ಥಾಪಿಸಲಾಯಿತು.

### ಉಳ್ಳಾಲ ರಘುನಾಥಯ್ಯ (೧೮೪೧ - ೧೯೨೧)

ಮಂಗಳೂರಿನ ಹಿರಿಯ ನ್ಯಾಯವಾದಿ, ಸಮಾಜ ಸುಧಾರಕ ಎನ್. ಅರಸಪ್ಪನವರೊಂದಿಗೆ ಬ್ರಹ್ಮ ಸಮಾಜವನ್ನು ಮಂಗಳೂರಿನಲ್ಲಿ ಆರಂಭಿಸಿದರು. ಕುದ್ಮುಲ್ ರಂಗರಾಯರಿಗೆ ಬೆಂಬಲವನ್ನಿತ್ತ ಇವರು ಅಮ್ಮೆಂಬಳ ಸುಬ್ಬರಾವ್ ಪೈ ಇವರ ಆತ್ಮೀಯ ಒಡನಾಡಿಯಾಗಿ ೩೫ ವರ್ಷಗಳ ಕಾಲ ಬ್ರಹ್ಮಸಮಾಜದ ಕಾರ್ಯದರ್ಶಿಯಾಗಿದ್ದರು. ಜಿಲ್ಲೆಯಲ್ಲಿ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಶ್ರಮಿಸಿದ ಇವರು ಹಿಂದೂ ವಿಧಿಗಳಂತೆ ತಾಯಿಯ ಉತ್ತರಕ್ರಿಯೆಯನ್ನು ನೆರವೇರಿಸಲು ನಿರಾಕರಿಸಿದುದರಿಂದ ಚಿತ್ರಾಪುರ ಸಾರಸ್ವತ ಸಮಾಜವು ಇವರನ್ನು ಜಾತಿಯಿಂದ ಬಹಿಷ್ಕರಿಸಿತು.[೧೪]

### ಶ್ರೀನಿವಾಸ ಮಲ್ಯ

ಶ್ರೀನಿವಾಸ ಮಲ್ಯರು ೧೯೦೨ರ ನವೆಂಬರ್ ೨೧ರಂದು ಜಿಲ್ಲೆಯ ಹೆಸರಾಂತ ಉಳ್ಳಾಲ ಮಲ್ಯ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಶ್ರೀ ಉಳ್ಳಾಲ ಮಂಜುನಾಥ ಮಲ್ಯ ಮತ್ತು ತಾಯಿ ಸರಸ್ವತಿ ಯಾನೆ ರುಕ್ಮಾಬಾಯಿಯವರು. ೧೯೨೦ರಲ್ಲಿ ಮಹಾತ್ಮಾ ಗಾಂಧೀಜಿ ಮಂಗಳೂರಿಗೆ ಬಂದು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಂಗಳೂರಿನ ಜನತೆಯ ಮುಂದೆ, ಸ್ವಾತಂತ್ರ್ಯ ಚಳವಳಿಯಲ್ಲಿ ದೇಶದ ಜನತೆ ವಹಿಸಬೇಕಾದ ಪಾತ್ರ, ಅಹಿಂಸಾತ್ಮಕ ಚಳವಳಿ, ಹರಿಜನೋದ್ಧಾರ, ಹರಿಜನರಿಗೆ ದೇವಳಗಳಲ್ಲಿ ಪ್ರವೇಶ, ಖಾದಿ-ಚರಕಗಳ ಬಗ್ಗೆ ಕೊಟ್ಟಸಂದೇಶಗಳಿಂದ ಶ್ರೀನಿವಾಸಮಲ್ಯರು ಪ್ರಭಾವಿತರಾದರು. ಮುಂದೆ ಜನಾನುರಾಗಿಯಾಗಿ ಜಿಲ್ಲೆಯ ಹಲವಾರು ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.[೧೫] ವಸಾಹತು ಕಾಲಘಟ್ಟದ ಶೈಕ್ಷಣಿಕ ಪ್ರಗತಿಯ ಪರಿಣಾಮವಾಗಿ ಮಹಿಳೆಯರ ಸಾಮಾಜಿಕ ಅಭಿವೃದ್ಧಿಗೆ ಶಿಕ್ಷಣದ ಅಗತ್ಯವನ್ನು ಹಲವು ಸಮಾಜ ಸುಧಾರಕರೂ ಮನಗಂಡರು.

### ಉಪಸಂಹಾರ

ಭಾರತದಲ್ಲಿ ೧೮ನೇ ಶತಮಾನದ ಉತ್ತರಾರ್ಧದಲ್ಲಿ ಹಾಗೂ ೧೯ನೇ ಶತಮಾನದ ಆದಿಯಲ್ಲಿ ಹಲವಾರು ಸುಧಾರಣಾವಾದಿಗಳು ಹಾಗೂ ಸುಧಾರಣಾ ಸಂಘಟನೆಗಳು ಹುಟ್ಟಿಕೊಂಡವು. ವಿದೇಶಿ ಯಾತ್ರಿಕರು ಕೂಡಾ ಭಾರತದ ಸ್ತ್ರೀಯರ ಸ್ಥಿತಿಗತಿಯ ಕುರಿತು ಬೆಳಕು ಚೆಲ್ಲಿರುವರು. ೧೮ನೇ ಶತಮಾನದ ಅಂತ್ಯದಲ್ಲಿ ಹಾಗೂ ಹತ್ತೊಂಭತ್ತನೇ ಶತಮಾನದ ಆದಿಯಲ್ಲಿ ಪಾಶ್ಚಿಮಾತ್ಯ ಚಿಂತನೆಗಳ ಪ್ರಭಾವದಿಂದ ಪ್ರೇರಿತರಾದ ಸುಧಾರಣಾವಾದಿಗಳು ಸುಧಾರಣಾ ಸಂಸ್ಥೆಗಳ ಸ್ಥಾಪನೆಗೆ ನಾಂದಿ ಹಾಡಿದರು. ಸುಧಾರಣಾವಾದಿಗಳು ಲಿಂಗ ವ್ಯವಸ್ಥೆಯ ಆಯಾಮದ ಸಂಬಂಧಗಳಲ್ಲಿ ಸುಧಾರಣೆಯ ಔಚಿತ್ಯವನ್ನು ಮನಗಂಡರು.
ವಸಾಹತುಶಾಹಿ ಆಡಳಿತದಲ್ಲಿ ಆಧುನಿಕತೆಯ ಪರಿಣಾಮವಾಗಿ ಭದ್ರವಾದ ವೈಚಾರಿಕ ಮತ್ತು ಸಾಮಾಜಿಕ ನೆಲೆಯನ್ನು ಮುನ್ನಡೆಸುವ ಪ್ರಕ್ರಿಯೆ ಕ್ರಮೇಣ ಬೆಳೆಯಿತು. ಈ ಬದಲಾವಣೆಯ ಸಂಧರ್ಭದಲ್ಲಿ ಸಮಾಜದ ಅಸ್ತಿತ್ವದಲ್ಲಿದ್ದ ಅನಿಷ್ಟ ಪದ್ಧತಿಗಳು, ಮತ್ತು ಅಸಮಾನತೆಗಳನ್ನು ಪ್ರಶ್ನಿಸಿದ ಚಳುವಳಿಗಳೇ ಕಾರಣವಾಗಿರದೆ ಸ್ಥಳೀಯವಾಗಿ ಕಾರ್ಯ ನಿರ್ವಹಿಸಿದ ಸಮಾಜ ಸುಧಾರಕರು ಮತ್ತು ಸಂಘಸಂಸ್ಥೆಗಳೂ ಮಹತ್ವದ ಕೊಡುಗೆ ನೀಡಿದವು.

### ಸಂದರ್ಭಸೂಚಿ


೧. ಕೃಷ್ಣಮೂರ್ತಿ ಎಸ್: ೧೯೮೪, ಭಾರತೀಯ ನಾರಿ ಮತ್ತು ಸಮಾನತೆ, ಐಬಿಎಚ್ ಪ್ರಕಾಶನ, ಬೆಂಗಳೂರು, ಪುಟ ೩೭.
೨. ಮೋಹನ್ ಕೃಷ್ಣ ರೈ.ಕೆ: ೨೦೦೭, ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨
೩. ಆರ್. ಇಂದಿರಾ: ೨೦೦೨, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
೪. ಸುಮಿತ್ ಸರ್ಕಾರ್ ಮತ್ತು ತನಿಕಾ ಸರ್ಕಾರ್: ೨೦೦೮, ವಿಮೆನ್ ಆಂಡ್ ಸೋಷಲ್ ರಿಫಾರ್ಮ್ ಇನ್ ಇಂಡಿಯಾ, ಜೆರಾಲ್ಡಿನ್ ಫೋಬ್ಸ್ ಇವರ ಲೇಖನ- ಎಡುಕೇಶನ್ ಫಾರ್ ವಿಮೆನ್, ಇಂಡಿಯಾನ ಯುನಿವರ್ಸಿಟಿ ಪ್ರೆಸ್, ಪುಟಗಳು ೬೪ -೬೬.
೫. ಸುದರ್ಶನ: ೧೯೭೭, ಡಾ.ತೋನ್ಸೆ ಮಾಧವ ಅನಂತ ಪೈ ಅಭಿನಂದನ ಗ್ರಂಥ, ಸಂಪಾದಕ ಅಡ್ಯನಡ್ಕ ಕೃಷ್ಣ ಭಟ್, ವಿಜಯ ಕಾಲೇಜು ಟ್ರಸ್ಟ್, ಮುಲ್ಕಿ ದಕ್ಷಿಣ ಕನ್ನಡ, ಪುಟಗಳು ೪೨೪ - ೪೩೬.
೬. ಜೆರಾಲ್ಡಿನ್ ಫೋಬ್ಸ್: ಪೂರ್ವೋಕ್ತ, ಪುಟಗಳು ೬೨-೬೪.
೭. ಬಾಬು ಶಿವ ಪೂಜಾರಿ: ಶ್ರೀ ನಾರಾಯಣ ಗುರು ವಿಜಯ ದರ್ಶನ, ಬಿಲ್ಲವ ಜಾಗೃತ ಬಳಗ ಮುಂಬಯಿ, ಪುಟಗಳು ೧೩- ೧೪, ೧೧೬-೧೩೯.

೮. ಬಿ.ಎ ವಿವೇಕ ರೈ: ೨೦೧೬, ಮಂಗಳೂರು ದರ್ಶನ: ಸಂಪುಟ ೩, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಪುಟಗಳು ೭-೧೦.

೯. ಎ ಬ್ರೀಫ್ ಹಿಸ್ಟರಿ ಆಫ್ ದಿ ಮ್ಯಾಂಗಲೋರ್ ಬ್ರಹ್ಮ ಸಮಾಜ್ ೧೮೭೦ - ೧೯೭೦, ಕಂಪೈಲ್ಡ್ ಫ್ರಾಮ್ ದಿ ಮ್ಯಾನು ಸ್ಕ್ರಿಪ್ಟ್ ನೋಟ್ಸ್ ಪ್ರಿಪ್ಯಾರ್ಡ್ ಬೈ ದಿ ಲೇಟ್ ರಾವ್ ಸಾಹಿಬ್ ಯು ಮಂಜಪ್ಪ ಇನ್ ಡಿಸೆಂಬರ್ ೧೯೪೬, ಆಂಡ್ ಫ್ರಾಮ್ ದಿ ರೆಕೋರ್ಡ್ಸ್ ಆಫ್ ದಿ ಬ್ರಹ್ಮ ಸಮಾಜ್ - ಬೈ ಎಚ್. ಸೋಮಪ್ಪ, ಪುಟ ೯.

೧೦. ಮಂಗಳೂರು ದರ್ಶನ: ಪೂರ್ವೋಕ್ತ, ಸಂಪುಟ ೩, ಪುಟಗಳುಪುಟಗಳು ೨-೩.

೧೧. ದಿ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ, ಹೂ ಇಸ್ ಹೂ: ೧೯೬೯, ಸಂಪುಟ ೧, ಗವರ್ನಮೆಂಟ್ ಆಫ್ ಮೈಸೂರು ಪಬ್ಲಿಕೇಷನ್, ಪುಟ ೨೫೫.

೧೨. ಸೂರ್ಯನಾಥ ಕಾಮತ್: ೧೯೮೦, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ೨೧೬.

೧೩. ಮಂಗಳೂರು ದರ್ಶನ: ಪೂರ್ವೋಕ್ತ, ಸಂಪುಟ ೩, ಪುಟಗಳು ೧೭-೧೯.

೧೪. ಸುದರ್ಶನ: ಪೂರ್ವೋಕ್ತ, ಪುಟಗಳು ೪೨೪ - ೪೩೬.

೧೫. ಮಂಗಳೂರು ದರ್ಶನ: ಪೂರ್ವೋಕ್ತ, ಸಂಪುಟ ೩, ಪುಟಗಳು ೪೮-೪೯